ಸಾಕ್ಷಿಯನ್ನು ದಿಃ 13.07.2023 ರಂದು ಕರೆಸಿ ಪ್ರಮಾಣೀಕರಿಸಲಾಯಿತು

ಮುಖ್ಯ ವಿಚಾರಣೆ ಪ್ರತಿವಾದಿ ಪರ ವಕೀಲರಿಂದಃ

ಈ ದಿನ ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರಿಕೆಯ ಮೂಲಕ ಹಾಕಿರುತ್ತೇನೆ. ಸದರಿ ಪ್ರಮಾಣಪತ್ರದಲ್ಲಿರುವ ಎಲ್ಲಾ ಅಂಶಗಳು ನನಗೆ ಗೊತ್ತು ಹಾಗೂ ಸದರಿ ವಿಚಾರಗಳು ಸತ್ಯವಾಗಿರುತ್ತದೆ.

ನಿಡಿ-29 ರಲ್ಲಿನ ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರ್ತಿಸಿದ್ದ ಸದರಿ ಸಹಿಯನ್ನು ನಿಡಿ-29(ಎ), ನಿಡಿ-29 ರಲ್ಲಿನ ಅಧಿಕಾರ ಪತ್ರ ನೀಡಿದವರ ಸಹಿಯನ್ನು ನಿಡಿ-29(ಬಿ) ಮತ್ತು (ಸಿ), ಸದರಿ ಅಧಿಕಾರ ಪತ್ರಕ್ಕೆ ಗುರುತುಬಲ್ಲವರಾಗಿ ಜಿ. ಮಣಿ ವಕೀಲರು ಸಹಿ ಮಾಡಿದ್ದು, ಸದರಿ ಸಹಿಯನ್ನು ನೋಡಿ ಗುರ್ತಿಸಿದ್ದು ಅದನ್ನು ನಿಡಿ-29(ಡಿ) ಎಂದು ಗುರುತಿಸಲಾಯಿತು.

ಪಾಟೀಸವಾಲು ವಾದಿ ಪರ ಶ್ರೀ ಕೆ ಪಿ ಎಂ ವಕೀಲರಿಂದಃ

ನಾನು ಬೆಂಗಳೂರಿನಲ್ಲಿ ಹಾಗೂ ಬೇತಮಂಗಲ ಸಮೀಪ ನಲ್ಲೂರಿನಲ್ಲಿ ವಾಸ ಇರುತ್ತೇನೆ. ನನಗೆ ನ್ಯಾಯಾಲಯದಿಂದ ಹ್ಯಾಂಡ್ ಸಮನ್ಸ ಬಂದಿರುತ್ತದೆ, ಅದನ್ನು ಯಾರು ತಂದಿದ್ದರೆಂದು ನನಗೆ ಗೊತ್ತಿಲ್ಲ. ಸದರಿ ಸಮನ್ಸನಲ್ಲಿ ಬೆಂಗಳೂರು ಮತ್ತು ಬೇತಮಂಗಲ ಸಮೀಪ ನಲ್ಲೂರಿನ ವಿಳಾಸ ಇಲ್ಲ ಎಂದರೆ ಸರಿ. ನನ್ನ ವಿಳಾಸವನ್ನು ಪ್ರತಿವಾದಿಗೆ ಅವರ ವಕೀಲರು ತಿಳಿಸಿರುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರವನ್ನು ನನ್ನ ಹೇಳಿಕೆ ಮೇರೆಗೆ ತಯಾರಿಸಿರುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಸ್ಥಳವನ್ನು ಕೆ ಜಿ ಎಫ್ ಎಂದು ತೋರಿಸಲಾಗಿದೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ನಾನು ವಾಸವಿರುವುದು ಬೆಂಗಳೂರು ಮತ್ತು ಬೇತಮಂಗಲ ಸಮೀಪ ನಲ್ಲೂರಿನ ವಿಳಾಸ ನಮೂದಿಸಿಲ್ಲ ಎಂದರೆ ಸರಿ. ನೋಟರಿಯವರು ರಿಜಿಸ್ಟರ್ ವಹಿಯನ್ನು ಹಾಗೂ ಫೀ ಸಂದಾಯ ರಶೀದಿಯನ್ನು ನಿರ್ವಹಿಸಬೇಕೆಂದರೆ ಸರಿ. ಸಾಮಾನ್ಯವಾಗಿ ನೋಟರಿ ಪ್ರಮಾಣಪತ್ರ ಮಾಡಬೇಕಾದರೆ ಕಾನೂನಿಗೆ ವಿರುದ್ದವಾಗಿ ಇರುವ ದಾಖಲಾತಿಗಳನ್ನು ಪರಿಶೀಲನೆ ಮಾಡಿ ನಂತರ ಮಾಡುತ್ತೇವೆಂದರೆ ಸರಿ. ನಿಡಿ-29 ದಾಖಲಾತಿಯನ್ನು ನನ್ನ ಸಮಕ್ಷಮ ಹಾಜರುಪಡಿಸಿದಾಗ ಅದು ಕೇವಲ 2 ರೂ. ದಸ್ತಾವೇಜು ಹಾಳೆ ಮೇಲೆ ಬರೆದ ದಾಖಲಾತಿ ಆಗಿತ್ತು ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ಅದರ ಹಿಂಭಾಗದಲ್ಲಿ ಸ್ಟಾಂಪ್ ಶುಲ್ಕ ಪಾವತಿ ಮಾಡಿದ ನಮೂದು

ಇದೆ ಎಂದು ನುಡಿಯುತ್ತಾರೆ. ನಿಡಿ-29 ದಾಖಲಾತಿಯನ್ನು ನಾನು ದಿ: 3.6.2004 ರಂದು ನೋಟರಿ ಮಾಡಿರುತ್ತೇನೆ. ನನ್ನ ಬಳಿ ಸದರಿ ದಾಖಲಾತಿ ಬರುವ ಪೂರ್ವದಲ್ಲಿ ಸ್ಟಾಂಪ್ ಶುಲ್ಕ ಪಾವತಿ ಮಾಡಿತ್ತೋ ಇಲ್ಲವೋ ಎಂದು ನಾನು ಹೇಳಲಾಗುವುದಿಲ್ಲ. ನಿಡಿ-29 ರಲ್ಲಿ ರಿಜಿಸ್ಟರ್ ನಂಬರ್ ನಮೂದಾಗಿರುವುದಿಲ್ಲ. ಸಾಕ್ಷಿಯು ಮುಂದುವರೆದು ನನಗೆ ಬರೆಯಲಾಗದೇ ಇರುವುದರಿಂದ ನಮೂದು ಇಲ್ಲ ಎಂದು ನುಡಿಯುತ್ತಾರೆ. ಅಧಿಕಾರ ಪತ್ರ ಬರೆದುಕೊಡುವವರ ಮತ್ತು ಬರೆಸಿಕೊಂಡವರ ಸಹಿಗಳನ್ನು ರಿಜಿಸ್ಟರ್ ನಲ್ಲಿ ಪಡೆಯಬೇಕೆಂದರೆ ಸಾಕ್ಷಿಯು ಈ ದಾಖಲಾತಿಗೆ ಸಂಬಂಧಿಸಿದಂತೆ ಪಡೆದಿರುವುದಿಲ್ಲ ಎಂದು ನುಡಿಯುತ್ತಾರೆ. ನಿಡಿ-29 ರಲ್ಲಿ ಅಧಿಕಾರ ಪತ್ರ ಬರೆದುಕೊಟ್ಟವರ ಪೊಟೋ ಮಾತ್ರ ಇದ್ದು, ಪಡೆದುಕೊಂಡವರ ಪೊಟೋ ಇಲ್ಲ ಎಂದರೆ ಸರಿ. 2004 ರ ನೊಟರಿ ರಿಜಿಸ್ಟರ್ ನನ್ನ ಬಳಿ ಇರುವುದಿಲ್ಲ. ಸದರಿ ರಿಜಿಸ್ಟರ್ ಅನ್ನು ಹುಡುಕಲಾಗದೇ ಇರುವುದರಿಂದ ಅದು ಇದೆಯೋ ಇಲ್ಲವೋ ಎಂದು ನಾನು ಹೇಳಲಾಗುವುದಿಲ್ಲ.

ನಿಡಿ-29 ರಲ್ಲಿ ನೋಟರಿ ಸ್ಟಾಂಪ್ ಲಗತ್ತಿಸಿಲ್ಲ ಎಂದರೆ ಸರಿ. ನಿಡಿ-29 ಅನ್ನು ದಸ್ತಾವೇಜು ಹಾಳೆಯಲ್ಲಿ ಬರೆಯಲಾಗಿದ್ದು, ಅದನ್ನು ಸ್ಟಾಂಪ್ ಪೇಪರ್ ನಲ್ಲಿ ಬರೆಯದೇ ಇರುವುದರಿಂದ ನೋಟರಿ ಮಾಡಲಾಗುವುದಿಲ್ಲ ಎಂದು ಪಕ್ಷಗಾರರಿಗೆ ಹೇಳಿದ್ದೀರಾ ಎಂದರೆ ಸಾಕ್ಷಿಯು ಸದರಿ ದಾಖಲಾತಿಯ ಮೇಲೆ ಸ್ಟಾಂಪ್ ಶುಲ್ಕ ಪಾವತಿ ಮಾಡಿಕೊಂಡು ಬಂದಿದ್ದರಿಂದ ಹೇಳಿರುವುದಿಲ್ಲ ಎಂದು ನುಡಿಯುತ್ತಾರೆ. ದಾಖಲಾತಿ ಹಾಳೆಗಳ ಮೇಲೆ ಪಕ್ಷಗಾರರ ಸಹಿ ಇಲ್ಲದೇ ಮತ್ತು ನೋಟರಿಯವರ ಸಹಿ ಇಲ್ಲದೇ ಇದ್ದಲ್ಲಿ ಅದರ ಮೇಲೆ ಸ್ಟಾಂಪ್ ಶುಲ್ಕ ಪಾವತಿ ಮಾಡಿದ ಕುರಿತು ನಮೂದಿಸುವುದಿಲ್ಲ ಎಂದರೆ ಸರಿಯಲ್ಲ.

ನಿಡಿ-29 ದಾಖಲಾತಿ ವಾದಿಗೆ ಸಂಬಂಧಿಸಿದ ದಾಖಲಾತಿ ಅಲ್ಲ ಮತ್ತು ಅದರಲ್ಲಿ ಕಾಣುವ ಸಹಿ ವಾದಿಯ ಸಹಿ ಅಲ್ಲ ಎಂದರೆ ಸರಿಯಲ್ಲ. ನಿಡಿ-29 ರಲ್ಲಿರುವ ಪೊಟೋ ದಲ್ಲಿ ಕಾಣುವ ವ್ಯಕ್ತಿ ನನ್ನ ಸಮಕ್ಷಮ ನೊಟರಿ ಮಾಡಿಸಲು ಬಂದಿಲ್ಲ, ನಾನು ನನ್ನ ನೋಟರಿ ಅಧಿಕಾರವನ್ನು ದುರ್ಬಳಕೆ ಮಾಡಿಕೊಂಡು ನಿಡಿ-29 ಅನ್ನು ನೋಟರಿ ಮಾಡಿದ್ದೇನೆಂದರೆ ಸರಿಯಲ್ಲ. ನಿಡಿ-29 ದಾಖಲಾತಿಯನ್ನು ನೋಟರಿ ಮಾಡುವ ಸಮಯದಲ್ಲಿ ನೋಡಿದ್ದೇನೆ, ನಂತರ ಈಗ ನೋಡುತ್ತಿದ್ದೇನೆ. ನಿಡಿ-29 ರಲ್ಲಿನ ದಿನಾಂಕ ತಿದ್ದುಪಡಿಯಾಗಿದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅದೇ ದಿನ

ಮಾಡಿರುತ್ತೇನೆಂದು ನುಡಿಯುತ್ತಾರೆ. ನಿಡಿ-29 ರ ದಾಖಲಾತಿಯನ್ನು ನಂತರ ದಿನಗಳಲ್ಲಿ ಮಾಡಿ, ಅದಕ್ಕೆ ಹಿಂದಿನ ದಿನಾಂಕವನ್ನು ನಮೂದಿಸಿ, ಸೃಷ್ಟಿ ಮಾಡಿದ್ದೇವೆಂದರೆ ಸರಿಯಲ್ಲ.

ಅಧಿಕಾರ ಪತ್ರದಲ್ಲಿ ಕ್ರಯಪತ್ರ ಮಾಡಿಕೊಡಲು ಅಧಿಕಾರ ನೀಡಲು ಬರುವುದಿಲ್ಲ ಎಂದರೆ ಸರಿಯಲ್ಲ. ಕ್ರಯಪತ್ರ ಬರೆದುಕೊಡಲು ಅಧಿಕಾರ ನೀಡಿದಲ್ಲಿ ಅಂತಹ ಅಧಿಕಾರ ಪತ್ರವನ್ನು ನಿಗದಿತ ಸ್ಟಾಂಪ್ ಶುಲ್ಕ ಪಾವತಿ ಮಾಡಿದ ಪತ್ರದ ಮೇಲೆ ಬರೆಯ ಬೇಕೆಂದರೆ ಸರಿಯಲ್ಲ. ನಿಡಿ-29 ಅನ್ನು ನನ್ನ ಅಧಿಕಾರ ದುರ್ಬಳಕೆ ಮಾಡಿದ ದಾಖಲಾತಿಯಾಗಿರುವುದರಿಂದ ಸದರಿ ದಾಖಲಾತಿಗೆ ನೋಟರಿ ಸ್ಟಾಂಪ್ ಲಗತ್ತಿಸಿಲ್ಲ, ರಿಜಿಸ್ಟರ್ ನಂಬರ್ ನಮೂದಿಸಿಲ್ಲ ಎಂದರೆ ಸರಿಯಲ್ಲ. ನೋಟರಿ ರಿಜಿಸ್ಟರ್ ನಲ್ಲಿ ಅಧಿಕಾರ ಪತ್ರ ಬರೆದುಕೊಟ್ಟವರ ಹೆಸರು, ಪಡೆದುಕೊಂಡವರ ಹೆಸರು, ಆಸ್ತಿಯ ವಿವರ ಹಾಗೂ ಪಕ್ಷಗಾರರ ಪೊಟೋಗಳನ್ನು ಲಗತ್ತಿಸಬೇಕೆಂದರೆ ಸರಿಯಲ್ಲ. ನಿಡಿ-29 ರಂತಹ ದಾಖಲಾತಿಯನ್ನು ವಾದಿಯು ಪ್ರತಿವಾದಿಗೆ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ಆ ಕಾರಣದಿಂದ ಪ್ರತಿವಾದಿಯು ನನ್ನನ್ನು ವಿಳಾಸ ತಿಳಿದುಕೊಂಡು ಸಾಕ್ಷಿ ಹೇಳಲು ಕರೆದು ಕೊಂಡು ಬಂದಿದ್ದಾರೆಂದರೆ ಸರಿಯಲ್ಲ. ನಿಡಿ-29 ಸೃಷ್ಟಿ ಮಾಡಿದ ದಾಖಲಾತಿ ಆದ್ದರಿಂದ ಇದುವರೆವಿಗೂ ನಾನು ಪಕ್ಷಗಾರರೊಂದಿಗೆ ಸಂಪರ್ಕದಿಂದ ಇದ್ದೇನೆಂದರೆ ಸರಿಯಲ್ಲ. ವಾದಿಗೆ ಮೋಸ ಮಾಡುವ ಸಲುವಾಗಿ ಪ್ರತಿವಾದಿಗೆ ಸಹಾಯ ಮಾಡಲು ನಿಡಿ-29 ಸೃಷ್ಟಿ ಮಾಡಿದ್ದೇವೆಂದರೆ ಸರಿಯಲ್ಲ. ನಾನು ನೋಟರಿಯಾಗಿರುವುದಾಗ ಕೆ ಜಿ ಎಫ್ ನ ರಾ. ಪೇಟೆಯ 5 ನೇ ತಿರುವಿನಲ್ಲಿರುವ ಶ್ರೀನಿವಾಸ್ ರವರು ಯಾರೆಂದು ನನಗೆ ಗೊತ್ತಿಲ್ಲ. ಶ್ರೀನಿವಾಸ್, ಪ್ರತಿವಾದಿ ಹಾಗೂ ವಿನಾಯಕ ಮೂರ್ತಿ ರವರು ಹಾಗೂ ನಾನು ಸೇರಿ ನಿಡಿ-29 ಅನ್ನು ಸೃಷ್ಟಿ ಮಾಡಿದ್ದೇವೆಂದರೆ ಸರಿಯಲ್ಲ.

ಮರುವಿಚಾರಣೆ: ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

(ಮಂಜುನಾಥ. ಆರ್)

ಪ್ರಧಾನ ಸಿವಿಲ್ ನ್ಯಾಯಾಧೀಶರು

ಮತ್ತು ಅಪರ ಜೆ ಎಂ ಎಫ್ ಸಿ, ಕೆ ಜಿ ಎಫ್